# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರವರ ಕಛೇರಿ, ಬೃಹತ್ ಮಹಾನಗರ ಪಾಲಿಕೆ ಕಛೇರಿಗಳು, ಬೆಂಗಳೂರು-560 002

ಸಂಖ್ಯೆ: ಬಿ12(ಸಿ1)/ಸಿಜಿ/ಪಿಆರ್/49/2021-22 ದಿನಾಂಕ: 04-1-2022
eoffice No. 15223

## ನೇಮಕಾತಿ ಆದೇಶ

ವಿಷಯ: ದಿವಂಗತ ಎಂ. ಧನರಾಜ್, ಜವಾನರು ರವರ ಪತ್ನಿಯಾದ ಶ್ರೀಮತಿ ಶಾಂತಮ್ಮ ರವರನ್ನು ಅನುಕಂಪದ ಆಧಾರದ ಮೇಲೆ ಪೌರಕಾರ್ಮಿಕರ ಹುದ್ದೆಗೆ ನೇಮಕಾತಿ ಮಾಡುವ ಬಗ್ಗೆ.

ಉಲ್ಲೇಖ: 1) ಸರ್ಕಾರಿ ಆದೇಶದ ಪತ್ರ ಸಂಖ್ಯೆ: ಡಿಪಿಎಆರ್ 100 ಎಸ್‌ಸಿಎ 95, ದಿ: 12-09-96.
2) ಸದರಿ ಅರ್ಜಿದಾರರ ಮನವಿ ಪತ್ರದ ದಿನಾಂಕ: 17-06-2021.
3) ಸಹಾಯಕ ಪೊಲೀಸ್ ಆಯುಕ್ತರು, ನಗರ ವಿಶೇಷ ಶಾಖೆ, ಆಡಳಿತ, ಪೊಲೀಸ್ ಕಮೀಷನರ್‌ರವರ ಪರವಾಗಿ, ಬೆಂಗಳೂರು ನಗರ, ಬೆಂಗಳೂರು ರವರ ದೃಢೀಕರಣ ಪತ್ರ ದಿ: 27-07-2021.
4) ಸ.ಕಂ.ಅ (ಚಾಮರಾಜಪೇಟೆ) ರವರ ಸ್ಥಳ ಮಹಜರ್ ವರದಿ ದಿ: 09-08-2021.
5) ಆರೋಗ್ಯ ವೈದ್ಯಾಧಿಕಾರಿ (ಪುಲಿಕೇಶಿನಗರ) ರವರ ಮಹಜರ್ ವರದಿ ದಿ: 27-08-2021.
6) ಜಂಟಿ ಆಯುಕ್ತರು (ಪೂರ್ವ) ರವರ ಅಧ್ಯಕ್ಷತೆಯಲ್ಲಿ ದಿ: 30-09-2021 ರಂದು ನಡೆದ ಅನುಕಂಪದ ಆಧಾರದ ನೇಮಕಾತಿ ಸಮಿತಿಯ ನಡವಳಿಗಳು.
7) ಉಪ ಆಯುಕ್ತರು (ಆಡಳಿತ) ರವರ ಅಧ್ಯಕ್ಷತೆಯಲ್ಲಿ ದಿ: 04-12-2021 ರಂದು ನಡೆದ ಅನುಕಂಪದ ಆಧಾರದ ನೇಮಕಾತಿ ಸಮಿತಿಯ ನಡವಳಿಗಳು.

--------

210
4/1/22

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅನುಕಂಪದ ಆಧಾರದ ನೇಮಕಾತಿ ಕೋರಿ ಸಲ್ಲಿಸಲಾದ ಮನವಿಯನ್ನು ಪರಿಶೀಲಿಸಿ, ಜಂಟಿ ಆಯುಕ್ತರು (ಪೂರ್ವ) ರವರ ಅಧ್ಯಕ್ಷತೆಯಲ್ಲಿ ದಿನಾಂಕ: 30-09-2021 ರಂದು ನಡೆದ ಸಮಿತಿ ಸಭೆಯಲ್ಲಿ ಪರಿಶೀಲಿಸಿ ಮತ್ತು ಚರ್ಚಿಸಿ, ತೆಗೆದುಕೊಂಡಿರುವ ತೀರ್ಮಾನದಂತೆ, ದಿವಂಗತ ಎಂ. ಧನರಾಜ್, ಜವಾನರು, ಆರೋಗ್ಯಾಧಿಕಾರಿ (ಪೂರ್ವ) ವಲಯದ ಆರೋಗ್ಯ ವೈದ್ಯಾಧಿಕಾರಿ (ಪುಲಿಕೇಶಿನಗರ) ವಿಭಾಗ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದವರು ಮೃತರಾಗಿದ್ದು, ನಿಯಮದಂತೆ ಸದರಿಯವರ ಪತ್ನಿಯಾದ ಶ್ರೀಮತಿ ಶಾಂತಮ್ಮ ರವರು 1ನೇ ತರಗತಿಯವರೆಗೆ ವ್ಯಾಸಂಗ ಮಾಡಿರುವುದರಿಂದ ಗ್ರೂಫ್ 'ಡಿ' ಹುದ್ದೆಯಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡಲು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ.

ಉಪ ಆಯುಕ್ತರು (ಆಡಳಿತ) ರವರ ಅಧ್ಯಕ್ಷತೆಯಲ್ಲಿ ದಿನಾಂಕ: 04-12-2021 ರಂದು ನಡೆದ ಅನುಕಂಪದ ಆಧಾರದ ಮೇಲೆ ನೇಮಕಾತಿ ಅಂತಿಮ ಪರಿಶೀಲನಾ ಸಮಿತಿ ಸಭೆಯಲ್ಲಿ ಶ್ರೀಮತಿ ಶಾಂತಮ್ಮ ರವರನ್ನು ಗ್ರೂಫ್ ಡಿ ಹುದ್ದೆಯಾದ ಪೌರಕಾರ್ಮಿಕರ ಹುದ್ದೆಯಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡಲು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ. ಸದರಿ ಸಮಿತಿಗಳ ಶಿಫಾರಸ್ಸಿನ ಹಿನ್ನೆಲೆಯಲ್ಲಿ ನೇಮಕಾತಿ ಪ್ರಾಧಿಕಾರಿಯಾದ ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ರವರು ಶ್ರೀಮತಿ ಶಾಂತಮ್ಮ ರವರ ಪ್ರಸ್ತಾವನೆಯನ್ನು ಪರಿಗಣಿಸಿ, ನೇಮಕಾತಿಗೆ ಅರ್ಹರೆಂದು ತೀರ್ಮಾನಿಸಿ ಅನುಮೋದಿಸಿರುತ್ತಾರೆ.

ಶ್ರೀಮತಿ ಶಾಂತಮ್ಮ ಕೋಂ ದಿವಂಗತ ಎಂ. ಧನರಾಜ್ ರವರ ವಿವರಗಳು ಈ ಕೆಳಕಂಡಂತೆ ಇರುತ್ತವೆ.

| | | |
|---|---|---|
| 1. | ಹೆಸರು | ಶ್ರೀಮತಿ ಶಾಂತಮ್ಮ |
| 2. | ಜನ್ಮ ದಿನಾಂಕ | 16-05-1989 (ಶಾಲಾ ವರ್ಗಾವಣೆ ಪ್ರಮಾಣ ಪತ್ರದಲ್ಲಿರುವಂತೆ) |
| 3. | ವಿಳಾಸ | ನಂ. 484, ಬೇಲಿಮಠದ ರಸ್ತೆ, ಭಕ್ಷಿಗಾರ್ಡನ್, ಬೆಂಗಳೂರು |
| 4. | ಪ್ರವರ್ಗ | ಪರಿಶಿಷ್ಟ ಜಾತಿ (ಭೋವಿ) (ದಿ: 30-06-2021 ರಂದು ತಹಶೀಲ್ದಾರ್, ಬೆಂಗಳೂರು ಉತ್ತರ ತಾಲ್ಲೂಕು ರವರು ವಿತರಿಸಿರುವ ಜಾತಿ ಪ್ರಮಾಣ ಪತ್ರ) |

ಉಲ್ಲೇಖ-(1)ರ ಸರ್ಕಾರಿ ಆದೇಶದ ಅನ್ವಯ ಹಾಗೂ ಉಲ್ಲೇಖ-(2) ರಿಂದ (5)ರ ವರೆಗಿನ ದಾಖಲಾತಿಗಳು ಮತ್ತು ವರದಿಗಳನ್ನಾಧರಿಸಿ ಉಲ್ಲೇಖ-(6) ಮತ್ತು (7)ರ ಸಭೆ ನಡವಳಿಗಳ ತೀರ್ಮಾನದಂತೆ, ಸದರಿಯವರನ್ನು ಅನುಕಂಪದ ಆಧಾರದ ಮೇಲೆ ವೇತನ ಶ್ರೇಣಿ ರೂ. 17000-28950ರಲ್ಲಿ ಗ್ರೂಪ್ "ಡಿ" ದರ್ಜೆಯಲ್ಲಿ (ಪೌರಕಾರ್ಮಿಕರು) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ, ಚಾಮರಾಜಪೇಟೆ ವಿಭಾಗ ಕಛೇರಿಯಲ್ಲಿ ಖಾಲಿ ಇರುವ ಪೌರಕಾರ್ಮಿಕರ ಹುದ್ದೆಗೆ ಈ ಕೆಳಕಂಡ ಷರತ್ತಿಗಳಿಗೊಳಪಡಿಸಿ ನೇಮಕಾತಿ ಮಾಡಿದೆ.

**ಷರತ್ತುಗಳು**

1) ಶ್ರೀಮತಿ ಶಾಂತಮ್ಮ ಕೋಂ ದಿವಂಗತ ಎಂ. ಧನರಾಜ್, ಇವರು ಪೌರಕಾರ್ಮಿಕರ ಹುದ್ದೆಗೆ ಈ ಪತ್ರ ತಲುಪಿದ 7 ದಿವಸಗಳೊಳಗಾಗಿ, ದೇಹದಾರ್ಢ್ಯತೆ ಪತ್ರ, ಶಾಲಾ ವರ್ಗಾವಣೆ / ಜನನ ಪ್ರಮಾಣ ಪತ್ರ ಮತ್ತು ಇತರೇ ಮೂಲ ದಾಖಲಾತಿಗಳೊಂದಿಗೆ ಅಧೀಕ್ಷಕ ಅಭಿಯಂತರರು (ಪಶ್ಚಿಮ) ರವರ ಬಳಿ ಕರ್ತವ್ಯಕ್ಕೆ ಹಾಜರಾಗತಕ್ಕದ್ದು.

2) ಈ ನೇಮಕಾತಿಯು 1977ರ ಕರ್ನಾಟಕ ನಾಗರಿಕ ಸೇವೆಗಳು (ಪ್ರೊಬೇಷನರಿ) ನಿಯಮಾವಳಿಯಂತೆ 2 ವರ್ಷಗಳ ಪರೀಕ್ಷಾರ್ಥ ಅವಧಿಗೆ ಒಳಪಟ್ಟಿರುತ್ತದೆ. ಈ ಅವಧಿಯಲ್ಲಿ ತೃಪ್ತಿಕರ ಸೇವೆ ಸಲ್ಲಿಸಿ, ಪರೀಕ್ಷಾರ್ಥ ಸೇವಾ ಅವಧಿಯನ್ನು ಘೋಷಿಸಿಕೊಳ್ಳುವುದು.

3) ಸದರಿಯವರು ಷರತ್ತು 2ನ್ನು ಪರೀಕ್ಷಾರ್ಥ ಅವಧಿ ಪೂರೈಸದಿದ್ದಲ್ಲಿ 1977ರ ಕರ್ನಾಟಕ ನಾಗರಿಕ ಸೇವೆಗಳು (ಪ್ರೊಬೇಷನರಿ) ನಿಯಮಾವಳಿಗಳ ನಿಯಮ 5(1)(ಬಿ) ರನ್ವಯ ಪಾಲಿಕೆಯ ಸೇವೆಯಿಂದ ಬಿಡುಗಡೆ ಮಾಡಲಾಗುವುದೆಂದು ತಿಳಿಯುವುದು.

4) ಈ ನೇಮಕಾತಿಯನ್ನು ಪಡೆಯಲು ಅಭ್ಯರ್ಥಿಯು ಯಾವುದಾದರೂ ನಕಲು ಇಲ್ಲವೇ ಫೋರ್ಜರಿ ದಾಖಲಾತಿಗಳನ್ನು ಅಥವಾ ಸುಳ್ಳು ಮಾಹಿತಿಯನ್ನು ಸಲ್ಲಿಸಿರುವುದು ದೃಢಪಟ್ಟಲ್ಲಿ 2020ರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಅಧಿಕಾರಿ ಮತ್ತು ನೌಕರರುಗಳ ಸಾಮಾನ್ಯ ವೃಂದ ಮತ್ತು ನೇಮಕಾತಿ) ನಿಯಮಗಳು, 1977ರ ಸಾಮಾನ್ಯ ನೇಮಕಾತಿ ನಿಯಮಾವಳಿ ನಿಯಮ (20), 1977ರ ಕರ್ನಾಟಕ ಮುನಿಸಿಪಲ್ ನಿಯಮಾವಳಿ ನಿಯಮ (25)ರ ರೀತ್ಯಾ ನೇಮಕಾತಿ ಹೊಂದುವ ಸಲುವಾಗಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ನಗರ ಪಾಲಿಕೆಗೆ ವಂಚಿಸಿರುತ್ತಾರೆಂದು ಭಾವಿಸಿ, 1957ರ ಕರ್ನಾಟಕ ನಾಗರಿಕ ಸೇವೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಾವಳಿಯ ನಿಯಮ 11ರ ರೀತಿ ನೇಮಕಾತಿ ಆದೇಶವನ್ನು ರದ್ದುಪಡಿಸಲಾಗುವುದು ಹಾಗೂ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲಾಗುವುದೆಂದು ತಿಳಿಯುವುದು.

5) ಪಿಂಚಣಿಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ (ಎಸ್‌ಪಿಎಲ್) 04 ಪಿಇಟಿ 2005, ದಿನಾಂಕ: 31-03-2006 ರಂತೆ, ಪಿಂಚಣಿಗೆ ಅರ್ಹರಿರುತ್ತೀರಿ.

6) ಸದರಿಯವರು ಅಗತ್ಯ ದಾಖಲೆಗಳನ್ನು ಕೂಡಲೇ ಒದಗಿಸಿ ನೂತನ ಪಿಂಚಣಿ ಯೋಜನೆಯಲ್ಲಿ ನೊಂದಾಯಿಸಲು ಸೂಚಿಸಿದೆ ಹಾಗೂ ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳು PRAN ಸಂಖ್ಯೆ ಸೃಜಿಸಲು ಹಾಗೂ ಕಟಾವಣೆಗೆ ಅಗತ್ಯ ಕ್ರಮಕೈಗೊಳ್ಳಲು ಸೂಚಿಸಿದೆ.

ಮಾನ್ಯ ಮುಖ್ಯ ಆಯುಕ್ತರವರ ಆದೇಶದಂತೆ)

3/1/22

ಉಪ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

03/1/22 3/1/22

ಪ್ರತಿಯನ್ನು: ಮಾನ್ಯ ಆಡಳಿತಗಾರರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
: ಮಾನ್ಯ ಮುಖ್ಯ ಆಯುಕ್ತರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
: ವಿಶೇಷ ಆಯುಕ್ತರು (ಯೋಜನೆ/ಆಡಳಿತ/ಹಣಕಾಸು) ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
: ವಲಯ ಆಯುಕ್ತರು (ಪೂರ್ವ/ಪಶ್ಚಿಮ) ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
: ಜಂಟಿ ಆಯುಕ್ತರು (ಪೂರ್ವ/ಪಶ್ಚಿಮ) ರವರಿಗೆ ಕಳುಹಿಸಿದೆ.
: ಅಧೀಕ್ಷಕ ಅಭಿಯಂತರರು (ಪಶ್ಚಿಮ) ರವರಿಗೆ ಅಭ್ಯರ್ಥಿಯ ಭಾವಚಿತ್ರದೊಂದಿಗೆ ಅಗತ್ಯಕ್ರಮಕ್ಕಾಗಿ ಕಳುಹಿಸಿದೆ.
: ಆರೋಗ್ಯಾಧಿಕಾರಿ (ಪೂರ್ವ) ರವರಿಗೆ ಮೃತ ನೌಕರರ ಸೇವಾಪುಸ್ತಕದೊಂದಿಗೆ ಕಳುಹಿಸಿದೆ.
: ಸ.ಕಾ.ನಿ.ಅ, ಘನತ್ಯಾಜ್ಯ ನಿರ್ವಹಣೆ, ಚಾಮರಾಜಪೇಟೆ ರವರಿಗೆ ಕಳುಹಿಸಿದೆ.
: ಆರೋಗ್ಯ ವೈದ್ಯಾಧಿಕಾರಿ (ಪುಲಿಕೇಶಿನಗರ) ರವರಿಗೆ ಕಳುಹಿಸಿದೆ.
: ಸಹಾಯಕ ಆಯುಕ್ತರು, ನೇಮಕಾತಿ ವಿಭಾಗರವರಿಗೆ ಕಳುಹಿಸಿದೆ.
: ಮು.ಲೆ.ಅ/ಮು.ಲೆ.ಪ/ಉ.ನಿ. (ಹಣಕಾಸು-ಪಶ್ಚಿಮ/ಪೂರ್ವ) ರವರಿಗೆ ಕಳುಹಿಸಿದೆ.
: ಮಾಹಿತಿ ಮತ್ತು ತಂತ್ರಜ್ಞಾನ ಸಲಹೆಗಾರರಿಗೆ ಕಳುಹಿಸುತ್ತಾ, ಪಾಲಿಕೆಯ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಚಿಸಿದೆ.
: ಅಭ್ಯರ್ಥಿಗೆ / ಕಛೇರಿ ಕಡತಕ್ಕೆ.